ದಿನಾಂಕ 25-04-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಸ ಸ ಅ ರವರಿಂದ.**

ಎರಡು ಕುರಿಗಳನ್ನು ದೂರಿದಾರರಿಗೆ ನೀಡಿರುತ್ತೇನೆ. ಈ ದಿನ ಕೋರ್ಟ ಪಿಸಿ 28 ರವರು ಹಣವನ್ನು ಹಾಜರುಪಡಿಸಿದ್ದು ಸದರಿ ಹಣವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು MO-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಡಿ.ಸಿ ವಕೀಲರಿಂದ.**

ಪಂಚರನ್ನು ಸಿಬ್ಬಂದಿ ಮೂಲಕ ಬರಮಾಡಿಕೊಂಡಿರುತ್ತೇನೆ. ಸದರಿ ಸಿಬ್ಬಂದಿಯವರ ಹೆಸರು ಹೇಳಲು ನೆನಪಿರುವುದಿಲ್ಲ. ಘಟನಾ ಸ್ಥಳವು ತಂತಿ ಬೇಲಿಯಿಂದ ಕೂಡಿದ ಕುರಿದೊಡ್ಡಿ ಆಗಿತ್ತು. ಗಬ್ಬೂರು ರಸ್ತೆಯ ಪಶ್ಚಿಮ ದಿಕ್ಕಿಗೆ ದೊಡ್ಡಿ ಬರುತ್ತದೆ. ಸದರಿ ಕುರಿದೊಡ್ಡಿಯ ಹತ್ತಿರ ವಿದ್ಯುತ್ ಕಂಬ ಇದ್ದವು. ಘಟನಾ ಸ್ಥಳದ ಹತ್ತಿರ ವಾಸದ ಮನೆಗಳು ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಸ್ವಲ್ಪ ದೂರದಲ್ಲಿ ಇವೆ ಎಂದು ನುಡಿಯುತ್ತಾರೆ. ಸದರಿ ಗಬ್ಬೂರು ರಸ್ತೆಯಿಂದ ಅಂದಾಜು 100 ಅಡಿ ಅಂತರದಲ್ಲಿ ಕುರಿದೊಡ್ಡಿ ಇದೆ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ಸ್ಥಳದಲ್ಲಿ ನಮ್ಮೊಂದಿಗೆ ಪಂಚರು ಹಾಗೂ ಸಾಕ್ಷಿದಾರರು ಇದ್ದರು. ದಿನಾಂಕ 09-05-2017 ರಂದು 3 ನೇ ಆರೋಪಿ ಗಂಗಾರಾಮ ಇತನನ್ನು ದಸ್ತಗಿರಿ ಮಾಡಿದ ಸಂದರ್ಭದಲ್ಲಿ ಆತನೊಂದಿಗೆ ಬೇರೆ ಯಾರು ಇರಲಿಲ್ಲ. ಸದರಿ 3 ನೇ ಆರೋಪಿಯನ್ನು ಎರಡು ಕುರಿಗಳೊಂದಿಗೆ ಠಾಣೆಗೆ ಕರೆತಂದಿರುತ್ತೇವೆ. ಗುನ್ನೆ ಸ್ಥಳದ ಪಂಚನಾಮೆ ಮತ್ತು ಕುರಿ ಮತ್ತು ಹಣವನ್ನು ಅಮಾನತುಪಡಿಸಿಕೊಂಡ ಪಂಚನಾಮೆಗಳಿಗೆ ಚಾಸಾ-2 ಮತ್ತು 3 ರವರು ಇರುತ್ತಾರೆ. ಸದರಿ ಪಂಚರು ಮಸೀದಪುರ ಗ್ರಾಮದವರು ಆಗಿರುತ್ತಾರೆ ಎಂದರೆ ಸರಿ. ಆರೋಪಿತನಿಂದ ಎರಡು ಕುರಿ ಮತ್ತು ಹಣವನ್ನು ಅಮಾನತುಪಡಿಸಿಕೊಳ್ಳುವ ಕಾಲಕ್ಕೆ ಯಾವುದೇ ಪೊಟೋ ತೆಗೆದಿರುವುದಿಲ್ಲ. ಕಡತವನ್ನು ಚಾಸಾ-9 ರವರಿಂದ ಪಡೆದುಕೊಂಡು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಪಂಚನಾಮೆ, ಸಾಕ್ಷಿದಾರರ ಹೇಳಿಕೆ ಪಡೆದಿರುತ್ತೇನೆ ಹಾಗೂ ದಿನಾಂಕ 09-05-2017 ರಂದು ಆರೋಪಿ ಗಂಗಾರಾಮನನ್ನು ವಿಚಾರಣೆ ಮಾಡಿ ಆತನಿಂದ ಸ್ವಖುಷಿ ಹೇಳಿಕೆ ಪಡೆದು ಆತನಿಂದ ಎರಡು ಕುರಿ ಮತ್ತು 15,000/- ನಗದುಗಳನ್ನು ಪಂಚನಾಮೆ ಮಾಡಿ ಜಪ್ತಿಪಡಿಸಿಕೊಂಡಿರುತ್ತೇನೆ, ಸಾಕ್ಷಿದಾರರ ಪುರವಣಿ ಹೇಳಿಕೆ ಪಡೆದಿರುತ್ತೇನೆ, 3 ನೇ ಆರೋಪಿಯನ್ನು

ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯ ಲಭ್ಯವಿಲ್ಲದೇ ಇದ್ದರೂ ಆರೋಪಿತನ ವಿರುದ್ಧ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.